# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ , ಮೈಸೂರು.

## SC.261/2021

**P.W.-08**
**C.W.-08**

| | | |
|---|---|---|
| ಹೆಸರು | : | Somanna |
| ತಂದೆಯ ಹೆಸರು | : | Basavaiah |
| ವಯಸ್ಸು | : | 44 Years |
| ಉದ್ಯೋಗ | : | Coolie |
| ವಾಸಸ್ಥಳ | : | Bannahalli, T.Narasipura |

**ದಿನಾಂಕಃ 03.12.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–**

ನನ್ನ ಊರು ಬನ್ನಹಳ್ಳಿ. ನಾನು ಸಹಿ ಹಾಕುತ್ತೇನೆ. ಈಗ ತೋರಿಸಿದ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ಶವಪಂಚನಾಮೆಯಾಗಿದ್ದು, ಅದನ್ನು ನಿಪಿ–10 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ–10(ಸಿ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು. ಲಕ್ಷ್ಮಮ್ಮ ಮೃತಪಟ್ಟರು ಎಂದು ತಿಳಿದು, ಶವವನ್ನು ನೋಡಲು ನಾನು ಟಿ.ನರಸೀಪುರದ ಆಸ್ಪತ್ರೆಗೆ ಹೋಗಿದ್ದೆ. ಆಗ ಪೊಲೀಸರು ಆಸ್ಪತ್ರೆಯ ಶವಾಗಾರದಲ್ಲಿ ಒಂದು ವರ್ಷದ ಹಿಂದೆ ನನ್ನ ಸಹಿಯನ್ನು ಪಡೆದುಕೊಂಡರು. ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಫೋಟೋಗಳನ್ನು ತೆಗೆದರೋ, ಇಲ್ಲವೋ ನನಗೆ ಗೊತ್ತಿಲ್ಲ. ಈಗ ತೋರಿಸುತ್ತಿರುವ ಫೋಟೋಗಳಲ್ಲಿ ನಾನು ಇದ್ದೇನೆ. ಅದರಲ್ಲಿ ಮೃತ ಲಕ್ಷ್ಮಮ್ಮನ ಶವ ಸಹ ಇದೆ. ಸದರಿ ಫೋಟೋಗಳನ್ನು ಈಗಾಗಲೇ ನಿಪಿ–11 ರಿಂದ 13 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಶವವನ್ನು ನೋಡಿದಾಗ ಎಲ್ಲೆಲ್ಲಿ ಗಾಯವಾಗಿತ್ತು ಎನ್ನುವುದನ್ನು ನಾನು ಗಮನಿಸಿರುವುದಿಲ್ಲ. ಆಸ್ಪತ್ರೆಯ ಶವಾಗಾರದಲ್ಲಿ ಬೇರೆ ಯಾರು ಇರಲಿಲ್ಲ. ಪೊಲೀಸರು ಶವ ನೋಡಿದ್ದೇವೆ ಎಂದು ಸಹಿ ಹಾಕಲು ಹೇಳಿದರು ಹೀಗಾಗಿ ಸಹಿ ಹಾಕಿದೆವು.

**SC.No.261/2021**
**P.W.-08**
**C.W.-08**

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)**

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ –**

2. ಅಲ್ಲಿ ಪೊಲೀಸರು ನನ್ನ ಸಮಕ್ಷಮ ಶವವನ್ನು ಪರೀಕ್ಷಿಸಿ ಶವದ ಮೇಲೆ ಆಗಿದ್ದಂತಹ ಗಾಯಗಳನ್ನು ಗುರುತಿಸಿ, ಬರೆದು, ನನ್ನ ಸಹಿಯನ್ನು ಪಡೆದರು ಎನ್ನುವುದು ಸರಿಯಲ್ಲ. ಅಲ್ಲಿ ರಂಗಯ್ಯ ಮತ್ತು ಶಾಂತರಾಜು ಇದ್ದರು ಎನ್ನುವುದು ನನಗೆ ಗೊತ್ತಿಲ್ಲ. ಅವರ ಹೇಳಿಕೆಯನ್ನು ಪೊಲೀಸರು ದಾಖಲಿಸಿಕೊಂಡರು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಶವಮಹಜರನ್ನು ನನಗೆ ಓದಿ ಹೇಳಿದ್ದು, ಅದನ್ನು ತಿಳಿದುಕೊಂಡು ನಂತರ ಸಹಿ ಹಾಕಿರುತ್ತೇನೆ ಎನ್ನುವುದು ಸರಿಯಲ್ಲ.

3. ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ– ಆರೋಪಿಯ ಪರ ವಕೀಲರು ಪಾಟೀಸವಾಲಿಗಾಗಿ ಸಮಯ ಕೋರಿದ್ದು, ಸಮಯ ನೀಡಲು ನಿರಕಾರಿಸಿ ಪಾಟೀಸವಾಲು "ಇಲ್ಲ" ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.

**ದಿನಾಂಕಃ .07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ –**

4. ನಿಮ್ಮ ಮಾವನಿಗೆ ತುಂಬಾ ಮಧ್ಯಪಾನ ಮಾಡುವ ಚಟ ಇತ್ತು ಎಂದು ಮಾಡಿದ ಸಲಹೆಗೆ ಸಾಕ್ಷಿ 'ನಾನು ನೋಡಿಲ್ಲ' ಎನ್ನುತ್ತಾರೆ. ನಿಪಿ–1 ದೂರಿನಲ್ಲಿ "ನಿಮ್ಮ ಮಾವನವರು ಪ್ರತಿದಿನ ಕುಡಿದು ಮತ್ತು ಸಿಕ್ಕ ಸಿಕ್ಕ ಜಾಗದಲ್ಲಿ ಕುಡಿದು ಬೀಳುತ್ತಿದ್ದರಿಂದ ಅವರನ್ನು ಇದೇ ರೀತಿ ಕುಡಿದು ಬಿದ್ದಿರುತ್ತಾರೆ ಎಂದು ತಿಳಿದುಕೊಂಡಿರುತ್ತಾರೆ" ಎಂದು ದೂರಿನಲ್ಲಿ ಹೇಳಿ ಬರೆಸಿರುತ್ತೇನೆ ಎನ್ನುವುದು ಸರಿ. 2 ನೇ ಆರೋಪಿ ಗೋವಿಂದ ನನ್ನ ಮಾವನ ಸ್ನೇಹಿತಬಂದು ವಿಷಯವನ್ನು ತಿಳಿಸಿದರು ಎಂದು ದೂರಿನಲ್ಲಿ ಹೇಳಿ ಬರೆಸಲು ಯಾವುದೇ ತೊಂದರೆ ಇರಲಿಲ್ಲ ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ, ಸಾಕ್ಷಿ ಆ ಸಮಯದಲ್ಲಿ 2 ನೇ ಆರೋಪಿಯ ಹೆಸರು ನನಗೆ ಗೊತ್ತಿರಲಿಲ್ಲ ಎನ್ನುತ್ತಾರೆ. 2 ನೇ ಆರೋಪಿಯ ಹೆಸರು ನಮಗೆ ಸೋಮವಾರ ಗೊತ್ತಾಯಿತು. ದಿಃ25.11.2021 ರಂದು ಮೊದಲ ಬಾರಿಗೆ 2 ನೇ ಆರೋಪಿಯನ್ನು ಈ ನ್ಯಾಯಾಲಯದಲ್ಲಿ ನೋಡಿದ್ದೆವು ಎನ್ನುವುದು ಸರಿ. ದಿಃ25.11.2021 ರಂದು ಪೊಲೀಸರು 2 ನೇ ಆರೋಪಿಯ ಹೆಸರು ಗೋವಿಂದ ಎಂದು ಹೇಳಿದ್ದರಿಂದ ನಮಗೆ ಆತನ ಹೆಸರು ಗೊತ್ತಾಯಿತು ಎನ್ನುವುದು ಸರಿ. ಅದಕ್ಕೂ ಮೊದಲು 2 ನೇ ಆರೋಪಿ ಗೋವಿಂದನನ್ನು ಪೊಲೀಸರು ನಮಗೆ ತೋರಿಸಿರಲಿಲ್ಲ ಎನ್ನುವುದು ಸರಿ.

5. ಮರುದಿನ ಶವ ಪಂಚನಾಮೆ ಮಾಡಿ, ಶವ ಪರೀಕ್ಷೆ ಮಾಡುವವರೆಗೂ ನಾವು ಕೆ.ಆರ್.ಆಸ್ಪತ್ರೆಯಲ್ಲೇ ಇದ್ದೆವು ಎನ್ನುವುದು ಸರಿ. ದಿಃ11.01.2021 ರಂದು ಕೆ.ಆರ್.ಆಸ್ಪತ್ರೆಯ ಔಟ್ ಪೋಸ್ಟ್ ನಲ್ಲಿ ನಾನು ದೂರನ್ನು ನೀಡಿರುವುದಿಲ್ಲ. ದಿಃ12.01.2021 ರಂದು ದೂರನ್ನು ಕೊಡುವ ಕಾಲಕ್ಕ, ನನಗೆ ನನ್ನ ಮಾವನಿಗೆ ಏಟಾಗಿರುತ್ತದೆ ಎನ್ನುವುದು ಗೊತ್ತಿತ್ತು, ಘಟನೆಯ ವಿವರದ ಬಗ್ಗೆ ಗೊತ್ತಿರಲಿಲ್ಲ ಎನ್ನುವುದು ಸರಿ.

6. ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಯಾವತ್ತೂ ನಮ್ಮ ಮನೆಗೆ ಬಂದು, 1 ನೇ ಆರೋಪಿ ನನ್ನ ಮಾವನ ಮೇಲೆ ಆಟೋ ಹರಿಸಿರುತ್ತಾನೆ ಎಂದು ಹೇಳಿರುವುದಿಲ್ಲ ಎನ್ನುವುದು ಸರಿ. ಸಾಕ್ಷಿ ಸ್ವತಃ ನುಡಿಯುತ್ತಾರೆ ಗಾಂಧಿನಗರದ ಆಟೋ ಸ್ಟಾಂಡಿನಲ್ಲಿ ಘಟನೆಯ ಬಗ್ಗೆ ತಿಳಿಯಿತು ಎನ್ನುತ್ತಾರೆ.

ಘಟನೆ ನಡೆದಿದೆ ಎನ್ನಲಾದ ಸ್ಥಳದ ಅಕ್ಕಪಕ್ಕದಲ್ಲಿ ಬಹಳ ವಾಸದ ಮನೆಗಳು ಇವೆ ಎನ್ನುವುದು ಸರಿ. ದಿನದ 24 ಗಂಟೆಯೂ, ಆ ರಸ್ತೆಯಲ್ಲಿ ಜನ, ಜಾನುವಾರು, ವಾಹನಗಳು ಓಡಾಡುತ್ತಿರುತ್ತವೆ ಎನ್ನುವುದು ಸರಿ. ಘಟನೆ ನಡೆದಿದೆ ಎನ್ನಲಾದ ಸ್ಥಳದ ಅಕ್ಕಪಕ್ಕದ ಜನರನ್ನು ನಾನು ವಿಚಾರಿಸಿದಾಗ ಅವರು 'ಗೊತ್ತಿಲ್ಲ' ಎಂದು ತಿಳಿಸಿದರು.

7. 1 ನೇ ಆರೋಪಿ ಶ್ರೀಧರ ಆಟೋ ಚಾಲಕನಲ್ಲ, ಆತನಿಗೆ ಸ್ವಂತ ಆಟೋ ಇರುವುದಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**2 ನೇ ಆರೋಪಿ ಪರ ವಕೀಲರು ಹಾಜರಿಲ್ಲದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**2 ನೇ ಆರೋಪಿಯನ್ನು ವಿಚಾರಿಸಲಾಗಿ ಆತ ತಾನು ಪಾಟೀಸವಾಲು ಮಾಡುವುದಿಲ್ಲ ಎಂದು ಹೇಳಿರುತ್ತಾನೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.